ಧೈರ್ಯವಿಲ್ಲದ ಅವನು ಡಿಂಗೋ ತರಹ ಶತ್ರು ಬೀಡೊಳಗೆ ನುಸುಳಿ ಬಂದ. ತನ್ನ ಪರ್ಲೀಮಿಲಳನ್ನು ತನ್ನಿಂದ ದೂರಮಾಡಿದ ಎಲ್ಲರನ್ನೂ ಮೋಸದಿಂದ ಕೊಲ್ಲಲು ಸಿದ್ಧನಾಗಿದ್ದ. ಉಳಿದ ಗಂಡಸರು, ಹೆಂಗಸರು ಮತ್ತು ಮಕ್ಕಳನ್ನು ನಿರ್ನಾಮ ಮಾಡುವುದು ಅವನ ಉದ್ದೇಶ. ಇದಕ್ಕಾಗಿ ಎಲ್ಲಾ ಉಪಾಯಗಳನ್ನು ಹೂಡಿದ್ದ. ಶತ್ರುಗಳ ಕಾವಲು ಹಗುರವಾಗಿ, ಅವರಿಂದ ಯಾವುದೇ ಮರುದಾಳಿ ಆಗದಂತೆ ಎಚ್ಚರಿಕೆ ವಹಿಸಿದ್ದ.

ಅವನ ಕಡೆಯವರು, ನಿಧಾನವಾಗಿ ಮುಂದುವರೆದು, ಯಾವುದೇ ಶಬ್ದವನ್ನೂ ಮಾಡದೆ ಶತ್ರುಗಳ ಹತ್ತಿರ ಬಂದರು.

ಚಿಕ್ಕ ಯಜಮಾನ ತನ್ನ ನಿದ್ದೆಯಲ್ಲಿ ಅಲ್ಲಾಡಿದ. ಪರ್ಲೀಮಿಲ್ ಅವನನ್ನು ಮಲಗಿಸಲು ದೈವಗಳ ಹಾಡೊಂದನ್ನು ಹಾಡಿದಳು. ‘ಅವನು ಬಯಲಿನಲ್ಲಿಯೇ ಸದಾ ವಾಸಿಸಬೇಕು. ಅಲ್ಲಿಯೇ ಅತಿ ಸುಂದರ ಮತ್ತು ಪ್ರಕಾಶಮಾನವಾದ ವಸ್ತುಗಳಿವೆ’ ಎಂಬುದೇ ಆ ಹಾಡಿನ ಸಾರಾಂಶ. ಮಗುವಿಗೆ ಮತ್ತೆ ನಿದ್ದೆ ಬಂತು. ತಾಯಿ ವಿಂಬಾಕೊಬೊಲೊನನ್ನು ಒತ್ತಿಕೊಂಡು ಮಲಗಿದಳು. ಮುಂಬರುವ ಅಪಾಯದ ಅರಿವೆ ಅವರಿಗಿರಲಿಲ್ಲ.

ಅವರ ಕಾಲಿನ ಬಳಿ ಇದ್ದ ನಾಯಿ ಗುರ್ ಎಂದಿತು. ವಿಂಬಾಕೊಬೊಲೊ ಹೊರಳಿದ. ಮತ್ತೆ ನಾಯಿ ಗುರ್ ಎಂದಿತು. ವಿಂಬಾಕೊಬೊಲೊ ಎದ್ದು ನಿಂತ. ಅವನು ಏಳುತ್ತಿದ್ದಂತೆಯೇ ಟಿರ್ಲ್ಯಾರ್ಟ ಅವನನ್ನು ಹೊಡೆದು ಕೆಡವಿದ. ಕೂಡಲೇ ಶತ್ರುಗಳು ಎಲ್ಲೆಡೆಗಳಿಂದ ಬಂದು ಮಲಗಿದ್ದವರನ್ನೆಲ್ಲಾ ಕಡಿದುಹಾಕಿದರು. ಕೆಲವರು ಎದ್ದು ತಮ್ಮ ಆಯುಧಗಳನ್ನು ತೆಗೆದುಕೊಂಡರೂ, ಆತ್ಮರಕ್ಷಣೆ ಮಾಡಿಕೊಳ್ಳಲು ಅವಕಾಶವೇ ಇರಲಿಲ್ಲ.

ಟಿರ್ಲ್ಯಾರ್ಟನಿಗೆ ಪರ್ಲೀಮಿಲಳ ಬೀಡಿನ ವಿವರಗಳು ಗೊತ್ತಿದ್ದವು. ಒಮ್ಮೆಗೇ ಅವನು ಅವಳ ಗಂಡನನ್ನು ಕೊಂದು, ಅಮಾನುಷವಾಗಿ ಅರಚುತ್ತಾ ಚಿಕ್ಕ ಯಜಮಾನನ ದೇಹದೊಳಗೆ ಗರಗಸದಂಚಿನ ಈಟಿಯನ್ನು ತೂರಿದ.

ಮಧುರ ಗಾಯಕಿ ಪರ್ಲೀಮಿಲಳ ನಾಲಗೆ ಬಾಯೊಳಗೆ ಅಂಟಿ ಕೊಂಡಿತು . ಪಕ್ಕದಲ್ಲಿ ಗಂಡ ಸತ್ತು ಬಿದ್ದಿದ್ದಾನೆ. ಮುಂದೆ ಮಗನ ದೇಹ ಶತ್ರುವಿನ ಈಟಿಯ ಮೇಲಿದೆ. ಕೂಡಲೆ ಅವಳು ಮಗುವಿನ ಸಮೇತ ಆ ಈಟಿಯನ್ನು ಎಳೆದುಕೊಂಡು ತನ್ನ ಹೃದಯಕ್ಕೆ ಚುಚ್ಚಿಕೊಂಡಳು. ತನ್ನ ಮಗನ ದೇಹ ತನಗೇ ಅಂಟಿಕೊಂಡಿತು. ಅವಳು ತನ್ನ ಗಂಡನ ದೇಹದ ಪಕ್ಕಕ್ಕೆ ಬಿದ್ದಳು. ಮೂವರ ರಕ್ತಗಳೂ ಒಂದಾಗಿ ಹರಿದವು.

ಟಿರ್ಲ್ಯಾರ್ಟ ಹೀಗೆ ತನ್ನ ಸೇಡನ್ನು ತೀರಿಸಿಕೊಂಡ. ಪಲಾಯನ ಮಾಡಿದವರಿಗೆ ಆಶ್ರಯ ನೀಡಿದ ಗುಂಪಿನವರಾರೂ ಉಳಿದಿರಲಿಲ್ಲ. ಅವರ ದೇಹಗಳನ್ನು ಕಾಗೆ ಮತ್ತು ಹದ್ದುಗಳಿಗೆ ಬಿಟ್ಟು ಅವನು ಮತ್ತು ಅವನ ಜನ ಕಲಾವಟಾಗೆ ಹಿಂದಿರುಗಿದರು.

ಮುಂದಿನ ವರ್ಷ ಅವರು ತಮ್ಮ ಶತ್ರುಗಳು ಸತ್ತು ಬಿದ್ದಿದ್ದ ಭೂಮಿಯ ಮೇಲೆಯೇ ಬೇಟೆಯಾಡ ಬಯಸಿದರು. ಆದರೆ ಅವರಿಗೆ ತುಸು ಭಯವಾಯಿತು. ಅಲ್ಲಿ ಸತ್ತವರ ಪ್ರೇತಗಳು ಅವರನ್ನು ಕಾಡಬಹುದು. ಹೀಗಾಗಿ ಅಲ್ಲಿಂದ ತುಸುದೂರದ ಸ್ಥಳವನ್ನು ಆರಿಸಿಕೊಂಡರು. ಅಲ್ಲಿ ರಾತ್ರಿ ಸಮಯದಲ್ಲಿ ವಿಚಿತ್ರ ದೀಪಗಳು ಚಲಿಸುತ್ತಿದ್ದವು. ಪ್ರೇತಗಳು ಅಲ್ಲಿರುವುದು ಖಚಿತವಾಯಿತು.

ಮರುದಿನ ಬೆಳಿಗ್ಗೆ ಅವರು ನೀರಿಗಾಗಿ ಬೌಲ್ಯಾ ಅಥವಾ ಸರೋವರಕ್ಕೆ ಹೋದರು. ಅದು ಸೂರ್ಯನ ಬೆಳಕಿಗೆ ಹೊಳೆಯುತ್ತಿತ್ತು! ಆದರೆ ನೀರೆಲ್ಲಿ? ಅವರು ನಿಂತು ನೋಡಿದರು. ಮುಂದೆ ನೀರು ಇರಲಿಲ್ಲ! ಮತ್ತೂ ಮುಂದೆ ಹೋಗಿ ನೋಡಿದರು. ಇಡೀ ಸರೋವರ ಉಪ್ಪಾಗಿ ಹೋಗಿತ್ತು. ಗುಂಪಿನವರೆಲ್ಲಾ ಹೆದರಿ ತಮ್ಮ ಹಿಂದಿನ ಬೇಟೆದಾಣಕ್ಕೆ ಧಾವಿಸಿದರು. ಯಾರಿಗೂ ಪ್ರೇತಗಳನ್ನು ಎದುರಿಸುವ ಶಕ್ತಿ ಇಲ್ಲ ಅಲ್ಲವೇ? ಟಿರ್ಲ್ಯಾರ್ಟ ತನ್ನ ಮಿತ್ರರನ್ನು ಹಿಂಬಾಲಿಸುವುದಾಗಿ ಹೇಳಿದ. ಆದರೆ ಮೊದಲು ತನ್ನ ಶತ್ರುಗಳ ಬಿಳುಚಿದ, ಮೂಳೆಗಳನ್ನು ನೋಡ ಬಯಸಿದ. ಅದು ತನಗೆ ಆನಂದ ತರುತ್ತದೆ, ಎಂದ. ವಿಷ ತುಂಬಿದ ಹೃದಯದಲ್ಲಿಯೇ ಅತ್ತ ಹೊರಟ. ಅವನ ಕಣ್ಣುಗಳಿಗೆ ಸರೋವರದ ಝಳ ಹೊಳೆದಂತಾಯಿತು. ಆದರೆ ತನ್ನ ಶತ್ರುಗಳಿದ್ದ ಕಡೆ ಯಾವುದೇ ಮೂಳೆಯೂ ಕಾಣಲಿಲ್ಲ. ಬದಲಾಗಿ ಕೊಲೆಗಳಾದ ಪ್ರದೇಶವೆಲ್ಲಾ ತೇಜೋಮಯ ಕೆಂಪು ಹೂವುಗಳಿಂದ ತುಂಬಿಹೋಗಿತ್ತು.

ಎತ್ತ ನೋಡಿದರೂ ಕೆಂಪು ಹೂವೇ! ಅಷ್ಟು ಹೂವುಗಳನ್ನು ಅವನು ಹಿಂದೆಂದೂ ನೋಡಿರಲಿಲ್ಲ.

ಅವನು ಮಂಕು ಬಡಿದು , ಹೂವುಗಳತ್ತ